ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/01/ಸಿಎಎಸ್/2020-21/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21 .10.2022

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು / ಗ್ರಂಥಪಾಲಕರು /ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ಉನ್ನತ ಶೈಕ್ಷಣಿಕ ಹಂತ 13ಎ ರಲ್ಲಿ ಪದೋನ್ನತಿ ಮಂಜೂರು ಮಾಡುವ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ : 1. ಸರ್ಕಾರದ ದಿನಾಂಕ : 02.03.2021 ರ ಸಂಖ್ಯೆ : ಇಡಿ/123/ಡಿಸಿಇ/ 2020ರ ಆದೇಶ

2. ಈ ಕಛೇರಿಯ ದಿನಾಂಕ : 16.03.2021ರ ಸಮಸಂಖ್ಯೆಯ ಪರಿಚಲನಾ ಆದೇಶ.
3. ಈ ಕಛೇರಿಯ ದಿನಾಂಕ : 13.08.2021 ಸಮಸಂಖ್ಯೆಯ ಸುತ್ತೋಲೆ.
4. ಈ ಕಛೇರಿಯ ದಿನಾಂಕ : 29.12.2021 ಸಮಸಂಖ್ಯೆಯ ಸುತ್ತೋಲೆ.
5. ಈ ಕಛೇರಿಯ ದಿನಾಂಕ: 03.10.2015 ಹಾಗೂ 31.10.2015 ರ ಸಂಖ್ಯೆ: ಕಾಶಿಇ/16/ಸಿಎಎಸ್/ ಉಬಡ್ತಿ/2015-16/ಬಸ್ಥಾವಿ.
6. ಈ ಕಛೇರಿಯ ದಿನಾಂಕ: 19.05.2015 ರ ಸಂಖ್ಯೆ: ಕಾಶಿಇ/27/ಸಿಎಎಸ್/ 2010-11/ಬಸ್ಥಾವಿ

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆ(ಸಿ.ಎ.ಎಸ್) ಅಡಿಯಲ್ಲಿ ಉನ್ನತ ಶೈಕ್ಷಣಿಕ ಹಂತ 13ಎ ರಲ್ಲಿ ಪದೋನ್ನತಿ ಮಂಜೂರು ಮಾಡುವ ಸಲುವಾಗಿ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಕಳುಹಿಸುವಂತೆ ಉಲ್ಲೇಖ (03) ಮತ್ತು (04)ರ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ಸದರಿ ಸುತ್ತೋಲೆಗಳಲ್ಲಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವ ಸಂಬಂಧ ಪ್ರಾಂಶುಪಾಲರ ಹಂತದ ಪರಿಶೀಲನೆಯಲ್ಲಿ ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಹಾಗೂ ಉಲ್ಲೇಖ (01) ರಲ್ಲಿ ಸಮಗ್ರ ಮಾರ್ಗಸೂಚಿಗಳನ್ನು ಸರ್ಕಾರವು ಜಾರಿಗೊಳಿಸಿರುವುದರಿಂದ ಅದರಂತೆ ಕ್ರಮವಹಿಸಲು ಪ್ರಾಂಶುಪಾಲರುಗಳಿಗೆ ಉಲ್ಲೇಖ (02) ರ ಪರಿಚಲನಾ ಆದೇಶದ ಮೂಲಕ ತಿಳಿಸಲಾಗಿರುತ್ತದೆ. ಆದಾಗ್ಯೂ ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳಲ್ಲಿ ನ್ಯೂನ್ಯತೆಗಳು ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ಶೈಕ್ಷಣಿಕ ಹಂತ 13ಎ ರಲ್ಲಿ ಪದೋನ್ನತಿಗಾಗಿ ಸಲ್ಲಿಸುವ ಪ್ರಸ್ತಾವನೆಗಳನ್ನು ಈ ಕೆಳಕಂಡಂತೆ ಸಲ್ಲಿಸಲು ಸೂಚಿಸಿದೆ.

1. ಪ್ರಾಂಶುಪಾಲರ ಹಂತದ ಪರಿಶೀಲನೆಯಲ್ಲಿ ವಿಶ್ವವಿದ್ಯಾಲಯದ ಪ್ರತಿನಿಧಿ/ ವಿಷಯ ತಜ್ಞರನ್ನು ಹೊರತು ಪಡಿಸಿ ಉಳಿದಂತೆ ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು/ಹಿರಿಯ ಪ್ರಾಧ್ಯಾಪಕರು ಮತ್ತು ಐ.ಕ್ಯು.ಎ.ಸಿ ಸಂಚಾಲಕರು ಇವರನ್ನೊಳಗೊಂಡ ತಂಡವನ್ನು ರಚಿಸತಕ್ಕದ್ದು.
2. ಉಲ್ಲೇಖ (01) ರ ಯುಜಿಸಿ ಮಾರ್ಗಸೂಚಿ 2018 ರಲ್ಲಿ ತಿಳಿಸಿರುವಂತೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಈ ತಂಡವು ಅಗತ್ಯ ಪೂರಕ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಚೆಕ್‌ಲಿಸ್ಟ್‌ನ ಪ್ರಕಾರ ಲಗತ್ತಿಸಿ ಮಂಜೂರಾತಿಗಾಗಿ ಈ ಕಛೇರಿಗೆ ಕಳುಹಿಸತಕ್ಕದ್ದು.

3. ಅರ್ಹ ಸಹಾಯಕ ಪ್ರಾಧ್ಯಾಪಕರು ಯುಜಿಸಿ 2018ರ ಮಾರ್ಗಸೂಚಿಯ 6.3.VI ರಲ್ಲಿ ತಿಳಿಸಿರುವಂತೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಉಳಿದಂತೆ ಉಲ್ಲೇಖ (03) ಮತ್ತು (04) ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ. ಪ್ರಸ್ತಾವನೆ ಕಳುಹಿಸುವ ಸಂಧರ್ಭದಲ್ಲಿ ಸದರಿ ಸುತ್ತೋಲೆ/ಮಾರ್ಗಸೂಚಿಗಳಲ್ಲಿ ತಿಳಿಸಿರುವ ನಿಯಮಗಳನ್ನು ಪಾಲಿಸದೇ ಉಲ್ಲಂಘನೆ ಮಾಡಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ತಿರಸ್ಕರಿಸಿ, ಕಾರಣರಾದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

21/10/2022

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮೇಲ್ಕಂಡ ಸುತ್ತೋಲೆಯನ್ನು ತಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಸಿಎಎಸ್ ಅಡಿಯಲ್ಲಿ ಅಕಾಡೆಮಿಕ್ ಲೆವೆಲ್ 13ಎ ರಲ್ಲಿ ವೃತ್ತಿ ಪದೋನ್ನತಿಗೆ ಪ್ರಸ್ತಾವನೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಪ್ರತಿಯನ್ನು :

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ– ತಮ್ಮ ವ್ಯಾಪ್ತಿಗೆ ಒಳಪಡುವ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಕೇಂದ್ರ ಕಛೇರಿಗೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲು ತಿಳಿಸಿದೆ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.
3. ಕಛೇರಿ ಪ್ರತಿ.